ಜೀವಾವಧಿ ಶಿಕ್ಷೆಯ ಅವಧಿಯಲ್ಲಿ ಕಡಿತ.

187 (1285): ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು)

ಮಾನ್ಯ ಗೃಹ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಜೀವಾವಧಿ ಶಿಕ್ಷೆಯನ್ನು 14 ವರ್ಷಗಳಿಂದ 10 ವರ್ಷಕ್ಕೆ ಇಳಿಸಲು ಕಳೆದ ವಿಧಾನ ಸಭೆ ಅಧಿವೇಶನದಲ್ಲಿ ಒಪ್ಪಿಗೆ ನೀಡಿದ್ದು, ಈ ವಿಷಯ ಕೇಂದ್ರ ಸರ್ಕಾರಕ್ಕೆ ತಲುಪಿದೆಯೆ ?

ಆ. ಹಾಗಿದ್ದಲ್ಲಿ ಈಗ ಯಾವ ಹಂತದಲ್ಲಿದೆ ?

ಇ. ಸರ್ಕಾರವು 10ವರ್ಷ ಶಿಕ್ಷೆ ಅನುಭವಿಸಿದ ಕೈದಿಗಳಿಗೆ ಅನುಕಂಪದ ಆಧಾರದ ಮೇಲೆ ಬಿಡುಗಡೆ ಮಾಡಲು ಏನಾದರೂ ಕಾರ್ಯಕ್ರಮ ಹಮ್ಮಿಕೊಂಡಿದೆಯೆ ?

ಶ್ರೀ ಬಿ. ರಮಾನಾಥ ರೈ (ಗೃಹ ರಾಜ್ಯ ಸಚಿವರು)

ಅ. ಹೌದು

ಆ. ಕೇಂದ್ರ ಸರ್ಕಾರದಲ್ಲಿ ಬಾಕಿ ಇದೆ

ಇ. ಇಲ್ಲ

ಶ್ರೀ ಡಿ.ಕೆ. ಶಿವಕುಮಾರ್:– ಮಾನ್ಯ ಅಧ್ಯಕ್ಷರೇ, ಕಳೆದ ವಿಧಾನಸಭೆಯಲ್ಲಿ ಮತ್ತು ವಿಧಾನಪರಿಷತ್ತಿನಲ್ಲಿ ಈ ಜೀವಾವಧಿ ಶಿಕ್ಷೆಯನ್ನು 14ವರ್ಷಗಳಿಂದ 10ವರ್ಷಕ್ಕೆ ಇಳಿಸಲು ತೀರ್ಮಾನ ಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೇವೆ ಎಂದು ಈಗಾಗಲೇ ತಿಳಿಸಿದ್ದಾರೆ. ಆದರೆ ಹತ್ತು ವರ್ಷಗಳ ಶಿಕ್ಷೆಯ ಅವಧಿಯನ್ನು ಅನುಕಂಪದ ಆಧಾರದ ಮೇಲೆ ಏನಾದರೂ ಕಡಿಮೆ ಮಾಡಿ ಕೈದಿಗಳನ್ನೂ ಬಿಡುಗಡೆ ಮಾಡುವುದಕ್ಕೆ ಅವಕಾಶ ಇದೆಯೇ ಎಂದು ಕೇಳಿದಕ್ಕೆ 'ಇಲ್ಲ' ಎಂದು ಹೇಳಿದ್ದಾರೆ. ಆರ್ಟಿಕಲ್ 161 ಪ್ರಕಾರ ನಮ್ಮ ಸರ್ಕಾರ ರಾಜ್ಯಪಾಲರಿಗೆ ಶಿಫಾರಸ್ಸು ಮಾಡಬಹುದಲ್ಲ ? ಎಲ್ಲಾ ರಾಜ್ಯಗಳಲ್ಲೂ ಇದನ್ನು ಮಾಡಿದ್ದಾರೆ. ಹೊಸದಾಗಿ ಶ್ರೀ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾದಾಗ, ಆದಕ್ಕಾದರೂ ಇದನ್ನು ಮಾಡಬೇಕು. ಮೊನ್ನೆ ಅವರು ಕೂಡ ಜೈಲಿಗೆ ವೀಕ್ಷಣೆ ಮಾಡುವುದಕ್ಕೆ ಹೋಗಿ ಬಂದಿದ್ದಾರೆ. ಆದ್ದರಿಂದ ಆರ್ಟಿಕಲ್ 161ರ ಪ್ರಕಾರ ಆದರೂ ಬಿಡಬಹುದಲ್ಲ ಎಂದು ಮಾನ್ಯ ಗೃಹಮಂತ್ರಿಗಳು ಕೇಳುತ್ತೇನೆ.

ಶ್ರೀ ಬಿ. ರಮಾನಾಥ ರೈ:– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿದ ಪ್ರಶ್ನೆಗೆ ನಾವು ಈಗಾಗಲೇ ಉತ್ತರದಲ್ಲಿ 'ನಾವು ಈ ಒಂದು 14 ವರ್ಷಗಳಿಂದ 10 ವರ್ಷಕ್ಕೆ ಇಳಿಸುವುದಕ್ಕೆ ಸಂಬಂಧಪಟ್ಟಂತೆ ಕೂಲಂಕಶವಾದ ವರದಿಯನ್ನು ರಾಷ್ಟ್ರಪತಿಯವರ ಒಪ್ಪಿಗೆಗಾಗಿ ಕಳಿಸಿಕೊಟ್ಟಿದ್ದೇವೆ. ನಾವು ಅನೇಕ ಸಾರಿ ರಿಮೈಂಡರ್ಸ್ ಕೂಡ ರಾಷ್ಟ್ರಪತಿಗೆ ಕಳಿಸಿದ್ದೇವೆ. ಅವರಿಂದ ಒಪ್ಪಿಗೆ ಬಂದ ತಕ್ಷಣ ನಾವು ಅದನ್ನು ಜಾರಿಗೆ ತರುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ.ಕೆ. ಶಿವಕುಮಾರ್:– ರಾಷ್ಟ್ರಪತಿಯವರದ್ದು ಆಯಿತು. ಆರ್ಟಿಕಲ್ 161ರ ಪ್ರಕಾರ ನಮ್ಮ ಸರ್ಕಾರ ರಾಜ್ಯಪಾಲರಿಗೆ ಶಿಫಾರಸ್ಸು ಮಾಡಬಹುದಲ್ಲ ?

ಶ್ರೀ ಬಿ ರಮಾನಾಥ ರೈ:– ಸನ್ಮಾನ್ಯ ಸದಸ್ಯರ ಭಾವನೆ ನಮಗೆ ಅರ್ಥವಾಗಿದೆ. ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಜಿ. ರಾಜುಗೌಡ:– ಕೇಂದ್ರ ಸರ್ಕಾರದ ಅನುಮತಿ ಬರುವವರೆಗೆ, ಈಗಾಗಲೇ 10 ವರ್ಷ

ಶಿಕ್ಷೆ ಅನುಭವಿಸಿರತಕ್ಕ ಖೈದಿಗಳಿಗೆ, ದಯಮಾಡಿ ಪೆರೋಲ್ ಮೇಲೆ ಬಿಡುಗಡೆ ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಬಿ. ರಮಾನಾಥ ರೈ:– ಸನ್ಮಾನ್ಯ ಸದಸ್ಯರ ಅಭಿಪ್ರಾಯ ಏನಿದೆ, ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:– 10 ವರ್ಷ ದಾಟಿರತಕ್ಕ ಖೈದಿಗಳು ಎಷ್ಟು ಜನ ಕರ್ನಾಟಕದ ಕಾರಾಗೃಹದಲ್ಲಿದ್ದಾರೆ. ಮತ್ತು 25ನೇ ವರ್ಷದ ಕರ್ನಾಟಕ ರಾಜ್ಯೋತ್ಸವಾದಾಗ 10 ವರ್ಷದವರನ್ನು ಬಿಡುಗಡೆ ಮಾಡಲಾಗಿತ್ತು. ಈಗ ಎಷ್ಟು ಜನರಿದ್ದಾರೆ, ಅವರನ್ನು ಬಿಡುಗಡೆ ಮಾಡತಕ್ಕ ಮನಸ್ಸು ಸರ್ಕಾರಕ್ಕೆ ಇದೆಯೇ ?

ಶ್ರೀ ಬಿ. ರಮಾನಾಥ ರೈ:– ಸನ್ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆ ಕಳುಹಿಸಿದರೆ, ಸಮರ್ಪಕವಾದ ಉತ್ತರವನ್ನು ಕೊಡಲಾಗುವುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಡಳಿತ ವ್ಯಾಪ್ತಿಯಲ್ಲಿ ಸಸ್ಯಗಳ ಬೆಳವಣಿಗೆ ಜಮೀನು

188 (575): ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಡಳಿತ ವ್ಯಾಪ್ತಿಯಲ್ಲಿ ಸಸ್ಯಗಳ ಬೆಳವಣಿಗೆಗೋಸ್ಕರ ಅವರವರ ಸ್ವಂತ ಜಮೀನುಗಳನ್ನು ಅವರವರಿಗೆ ಎಷ್ಟು ಜನರಿಗೆ ಕೊಡಲಾ (ವಿವರಗಳನ್ನೊದಗಿಸುವುದು):

ಆ. ಯಾವ ಆಧಾರದ ಮೇಲೆ ಅವರವರುಗಳಿಗೆ ಈ ಜಮೀನುಗಳನ್ನು ಸಸ್ಯ ಬೆಳವಣಿಗೆಯ ಉದ್ದೇಶದಿಂದ ಕೊಡಲಾಗಿದೆ ?

ಇ. ಈ ಜಮೀನುಗಳಲ್ಲಿ ಇತರೆ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದ ಅನುಮತಿ ಇದೆಯೇ ?

ಈ. ಈ ಜಮೀನುಗಳನ್ನು ಹೊಂದಿರುವವರು ಸರ್ಕಾರದ ಕಾನೂನುಗಳನ್ನು ಉಲ್ಲಂಘಿಸಿರುತ್ತಾರೆಯೇ ?

ಉ. ಹಾಗಿದ್ದಲ್ಲಿ, ಕಾನೂನು ಉಲ್ಲಂಘಿಸಿದವರ ಮೇಲೆ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. ಪಟ್ಟಿ 'ಎ' ನಲ್ಲಿ ವಿವರಗಳನ್ನು ಒದಗಿಸಿದೆ.

ಆ. ಸರ್ಕಾರಿ ಆದೇಶದ ಸಂಖ್ಯೆ ಹೆಚ್‌ಯುಡಿ 478, ಎಂಎನ್‌ಎಕ್ಸ್ 86, ದಿನಾಂಕ 1–1–87 ರ ಆಧಾರದ ಮೇಲೆ ಕೊಡಲಾಗಿದೆ.

ಇ. ಸರ್ಕಾರದ ಅನುಮತಿ ಇರುವುದಿಲ್ಲ.

ಈ. ಕೆಲವು ಪ್ರಕರಣಗಳಲ್ಲಿ ಉಲ್ಲಂಘನೆಯಾಗಿರುತ್ತದೆ. ವಿವರಗಳನ್ನು ಪಟ್ಟಿ 'ಎ' ನಲ್ಲಿಯ ಕಾಲಂ 5ರಲ್ಲಿ ನೀಡಲಾಗಿದೆ.